# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **542 (672)**

2 ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

3 ಉತ್ತರಿಸುವ ದಿನಾಂಕ : 13/12/2024

4 ಉತ್ತರಿಸುವ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರಾವಳಿ ಅಭಿವೃದ್ಧಿ ಮಂಡಳಿ ರಚನೆಯ ಪ್ರಸ್ತುತ ಯಾವ ಹಂತದಲ್ಲಿದೆ; ಹೊಸದಾಗಿ ರಚನೆಯಾದ ಕರಾವಳಿ ಪ್ರದೇಶ ಅಭಿವೃದ್ಧಿ ಮಂಡಳಿಗೆ ಸೃಜಿಸಲಾದ ಹುದ್ದೆಗಳೆಷ್ಟು; ಇವುಗಳಲ್ಲಿ ಎಷ್ಟು ಹುದ್ದೆಗಳನ್ನು ತುಂಬಲಾಗಿದೆ; ಖಾಯಂ ನೌಕರರ ಸಂಖ್ಯೆ ಎಷ್ಟು; ನಿಯೋಜನ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಹುದ್ದೆಗಳೆಷ್ಟು; | ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಕರಾವಳಿ ಅಭಿವೃದ್ಧಿ ಮಂಡಳಿಯಾಗಿ ಪರಿವರ್ತಿಸಲು ಕಾಯ್ದೆಯನ್ನು ರೂಪಿಸಲಾಗಿದ್ದು, ಸದರಿ ಕಾಯ್ದೆಗೆ ಘನತೆವೆತ್ತ ರಾಜ್ಯಪಾಲರು ಸಹಿ ಹಾಕಿದ್ದು, ದಿನಾಂಕ:10.06.2024 ರಂದು ರಾಜ್ಯ ಸರ್ಕಾರವು ಅಧಿಕೃತ ವಾಗಿ ಗೆಜೆಟ್ ನೋಟಿಫಿಕೇಶನ್‌ನಲ್ಲಿ ಪ್ರಕಟಿಸಲಾಗಿದೆ. ಪ್ರಸ್ತುತ ನಿಯಮಗಳನ್ನು ರೂಪಿಸಲಾಗಿದ್ದು, ಕಡತವು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯಲ್ಲಿ ಪರಿಶೀಲನಾ ಹಂತದಲ್ಲಿದೆ(ಕಡತ ಸಂಖ್ಯೆ:ಪಿಡಿಎಸ್ 56 ಪಿಟಿಪಿ 2021).<br>2024-25ನೇ ಸಾಲಿನ ಆಯವ್ಯಯದಲ್ಲಿ ಪ್ರಾಧಿಕಾರ ಎಂದು ಅನುದಾನ ನಿಗದಿಪಡಿಸಿದ್ದರಿಂದ ಪ್ರಸ್ತುತ ಪ್ರಾಧಿಕಾರವೆಂದು ವ್ಯವಹರಿಸಲಾಗಿದ್ದು, ದಿನಾಂಕ:01.04.2025 ರಿಂದ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಬದಲು ಕರಾವಳಿ ಅಭಿವೃದ್ಧಿ ಮಂಡಳಿಯಾಗಿ ಕಾರ್ಯ ನಿರ್ವಹಿಸಲು ಕ್ರಮವಹಿಸಲಾಗುತ್ತದೆ.<br>ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೃಜಿಸಲಾದ ಹುದ್ದೆಗಳು, ಭರ್ತಿಮಾಡಲಾದ ಹುದ್ದೆಗಳು ಹಾಗೂ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಹೊಸದಾಗಿ ರಚನೆಯಾದ ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯನ್ನು ನೇಮಕಾತಿ ಮಾಡಲಾಗಿದೆಯೇ; ಮಾಡಲ್ಲದಿದ್ದರೆ ಯಾವಾಗ ನೇಮಿಸಲಾಗುವುದು; | ಅಧ್ಯಕ್ಷರ ನೇಮಕಾತಿಯಾಗಿರುವುದಿಲ್ಲ. ಪ್ರಸ್ತುತ ಸರ್ಕಾರದ ಆದೇಶದಂತೆ ಯೋಜನಾ ಸಚಿವರೇ ಪ್ರಭಾರದಲ್ಲಿರುತ್ತಾರೆ. ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರನ್ನು ನಿಯೋಜನೆ ಮೇಲೆ ನೇಮಕಾತಿ ಮಾಡಲಾಗಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ. |
| ಇ) | 2024-25 ನೇ ಸಾಲಿನಲ್ಲಿ ಕರಾವಳಿ ಅಭಿವೃದ್ಧಿ ಮಂಡಳಿಗೆ ನಿಗದಿಪಡಿಸಿದ ಅನುದಾನದ ಮೊತ್ತವೆಷ್ಟು ಇವುಗಳಿಗೆ ಕ್ರಿಯಾಯೋಜನೆ ತಯಾರಿಸಲಾಗಿದೆಯೇ, ಎಷ್ಟು ಕಾಮಗಾರಿಗಳನ್ನು ಆಯ್ಕೆ ಮಾಡಲಾಗಿದೆ; ಇವುಗಳಲ್ಲಿ ಅನುಷ್ಠಾನ ಮಾಡಲಾದ ಕಾಮಗಾರಿಗಳೆಷ್ಟು: ಇವುಗಳಿಗೆ ಮಾಡಿದ ವೆಚ್ಚವೆಷ್ಟು; ಕಾಮಗಾರಿ ಬಾಕಿ ಉಳಿಯಲು ಕಾರಣವೇನು: | ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ 2024-25ನೇ ಸಾಲಿನ ಆಯವ್ಯಯದಲ್ಲಿ ರೂ.1050.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, ಕ್ರಿಯಾ ಯೋಜನೆಯು ಸ್ವೀಕೃತವಾಗಿದ್ದು, ಅನುಮೋದನೆ ನೀಡಲು ಕ್ರಮವಹಿಸಲಾಗಿದೆ. |
| ಈ) | ಕರ್ನಾಟಕದ ಕರಾವಳಿ ಪ್ರದೇಶಗಳು ವಿಸ್ತಾರವಾಗಿದ್ದು ಹಲವು ಭೌಗೋಳಿಕ ವೈವಿಧ್ಯತೆ ಹೊಂದಿರುವುದರಿಂದ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಂತೆ ಕರಾವಳಿ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನ ನೀಡಿ ಮೇಲ್ದರ್ಜೆಗೇರಿಸಲು ಸರ್ಕಾರದ ಕ್ರಮವೇನು; ಯಾವ ಕಾಲಮಿತಿಯೊಳಗೆ ಈ ಬೇಡಿಕೆಯನ್ನು ಈಡೇರಿಸಲಾಗುವುದು? | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಂತೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೆಚ್ಚಿನ ಅನುದಾನ ನೀಡುವ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗುವುದು. ಆದರೆ ಕರಾವಳಿ ಅಭಿವೃದ್ಧಿ ಮಂಡಳಿಯನ್ನು ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಯು ಇರುವುದಿಲ್ಲ. |

**ಸಂಖ್ಯೆ: ಪಿಡಿಎಸ್/116/ಪಿಟಿಪಿ/2024**

(ಡಿ.ಸುಧಾಕರ್)

ಅನುಬಂಧ

ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ/ನೌಕರರ ವಿವರ ಈ ಕೆಳಕಂಡಂತಿದೆ;

| ಕ್ರ. ಸಂ | ಹುದ್ದೆಯ ಹೆಸರು | ಹುದ್ದೆ ಸಂಖ್ಯೆ | ಖಾಯಂ | ನಿಯೋಜನೆ ಮೇರೆಗೆ | ಬಾಹ್ಯ ಮೂಲದಿಂದ | ಷರಾ |
|---|---|---|---|---|---|---|
| 1. | ಕಾರ್ಯದರ್ಶಿ | 1 | ಖಾಯಂ ಹುದ್ದೆ | ನಿಯೋಜನೆ ಮೇರೆಗೆ | - | ಪ್ರಾಧಿಕಾರಕ್ಕೆ ಸಿ&ಆರ್ ಇಲ್ಲದ ಕಾರಣ ನಿಯೋಜನೆ ಮೇರೆಗೆ ಖಾಯಂ ಅಧಿಕಾರಿಗಳನ್ನು ನಿಯೋಜಿಸಲಾಗುತ್ತಿದೆ. |
| 2. | ಅಧ್ಯಕ್ಷರ ಆಪ್ತ ಕಾರ್ಯದರ್ಶಿ | 1 | ಖಾಯಂ ಹುದ್ದೆ | ನಿಯೋಜನೆ ಮೇರೆಗೆ | - | |
| 3. | ಕಛೇರಿ ವ್ಯವಸ್ಥಾಪಕರು | 1 | ಖಾಯಂ ಹುದ್ದೆ | ಖಾಲಿ | - | |
| 4. | ಲೆಕ್ಕ ಪರಿಶೋಧನಾಧಿಕಾರಿ | 1 | ಖಾಯಂ ಹುದ್ದೆ | ಹೆಚ್ಚುವರಿ ಪ್ರಭಾರ | - | |
| 5. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು | 1 | ಖಾಯಂ ಹುದ್ದೆ | ಹೆಚ್ಚುವರಿ ಪ್ರಭಾರ | - | |
| 6. | ಪ್ರಥಮ ದರ್ಜೆ ಸಹಾಯಕರು | 1 | ಖಾಯಂ ಹುದ್ದೆ | | ಹೊರಗುತ್ತಿಗೆಸೇವೆಯನ್ನುಪಡೆಯಲಾಗಿದೆ | |
| 7. | ಶೀಘ್ರಲಿಪಿಗಾರರು | 1 | ಖಾಯಂ ಹುದ್ದೆ | | | |
| 8. | ಡಾಟಾ ಎಂಟ್ರಿ ಅಪರೇಟರ್ | 1 | ಖಾಯಂ ಹುದ್ದೆ | | | |
| 9. | ಗ್ರೂಪ್ ಸಿ | 2 | ಖಾಯಂ ಹುದ್ದೆ | | | |
| 10 | ವಾಹನ ಚಾಲಕರು | 1 | ಖಾಯಂ ಹುದ್ದೆ | | | |
| 11 | ಡಿ ದರ್ಜೆ ನೌಕರರು | 3 | ಖಾಯಂ ಹುದ್ದೆ | | | |
| | ಒಟ್ಟು | 14 | | | | |